## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ನಂಬ್ರ: 2287-2017**

ಸರ್ಕಾರದ ಪರ
ಕುಂದಾಪುರ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

1. ಶ್ರೀಮತಿ ಗುಲಾಬಿಯಮ್ಮ ಮತ್ತು ಇತರರು. --- ಆರೋಪಿತರು

**:ದೋಷಾರೋಪಣೆ:**

ಶ್ರೀಮತಿ ರೋಹಿಣಿ .3. ಬಿ.ಎ., ಎಲ್ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ:

1.ಶ್ರೀಮತಿ ಗುಲಾಬಿಯಮ್ಮ, 64 ವರ್ಷ,
ಗಂಡ: ದಿ. ನಾಗರಾಜ ಹತ್ವಾರ್,

2. ವಾದಿರಾಜ ಹೆಬ್ಬಾರ್, 48 ವರ್ಷ,
ಬೀಜಾಡಿ ಗ್ರಾಮ ಪಂಚಾಯತ್ ಸದಸ್ಯ,
ಬೀಜಾಡಿ ಗ್ರಾಮ, ಕುಂದಾಪುರ ತಾಲೂಕು.

3. ಶ್ರೀಮತಿ ಶಾಂಭವಿ, 48 ವರ್ಷ,
ಗಂಡ: ಗೋಪಾಲ ಪೂಜಾರಿ,

4. ಸತೀಶ್ ಪೂಜಾರಿ, 30 ವರ್ಷ,
ತಂದೆ: ಗೋಪಾಲ ಪೂಜಾರಿ,

5. ಶ್ರೀಮತಿ ಶಾರದಾ ಗಾಣಿಗ, 52 ವರ್ಷ,
ಗಂಡ: ರಾಮಚಂದ್ರ ಗಾಣಿಗ.

2 ರಿಂದ 5 ರವರು
ವೈದ್ಯರಬೆಟ್ಟು, ಬೀಜಾಡಿ ಗ್ರಾಮ,
ಕುಂದಾಪುರ ತಾಲೂಕು.

6. ಶಂಕರ ನಾರಾಯಣ ಗಾಣಿಗ, 60 ವರ್ಷ,
ತಂದೆ: ಅಣ್ಣಪ್ಪ ಗಾಣಿಗ,
ಫಿಶರೀಸ್ ರಸ್ತೆ, ಬೀಜಾಡಿ ಗ್ರಾಮ,
ಕುಂದಾಪುರ ತಾಲೂಕು.

7. ಆನಂದ ಪೂಜಾರಿ, 45 ವರ್ಷ,
ತಂದೆ: ನಾರಾಯಣ ಪೂಜಾರಿ,

8. ಶ್ರೀಮತಿ ಸರೋಜ, 42 ವರ್ಷ,
ಗಂಡ: ರಮೇಶ ಮೊಗವೀರ

7 ಮತ್ತು 8 ನೇಯವರು
ವೈಧ್ಯರಬೆಟ್ಟುಕ, ಬೀಜಾಡಿ ಗ್ರಾಮ,
ಕುಂದಾಪುರ ತಾಲೂಕು.

9. ಸದಾನಂದ ಮಯ್ಯ 60 ವರ್ಷ,

ಅಡುಗೆಯವರು,

10. ಶ್ರೀಮತಿ ಯಶೋದಾ ಮಯ್ಯ, 58 ವರ್ಷ,
ಗಂಡಃ ಸದಾನಂದ ಮಯ್ಯ

9 ಮತ್ತು 10 ರವರು
ಬೀಜಾಡಿ ಗ್ರಾಮ, ಕೋಟೇಶ್ವರ ಅಂಚೆ,
ಕುಂದಾಪುರ ತಾಲೂಕು.

11. ಶ್ರೀ ಆನಂದ, 42 ವರ್ಷ,
ಪಂಚಾಯತ್ ಅಭಿವೃದ್ಧಿ ಅಧಿಕಾರಿ,
ಬೀಜಾಡಿ ಗ್ರಾಮ, ಕುಂದಾಪುರ ತಾಲೂಕು.

12. ನಾರಾಯಣ, 38 ವರ್ಷ,
ಗುಮಾಸ್ತ, ಬೀಜಾಡಿ ಗ್ರಾಮ ಪಂಚಾಯತ್,
ಬೀಜಾಡಿ, ಕುಂದಾಪುರ ತಾಲೂಕು.

13. ಶ್ರೀಮತಿ ಜಯಂತಿ ಗಾಣಿಗಕ, 35 ವರ್ಷ,
ಉಪಾಧ್ಯಕ್ಷೆ, ಬೀಜಾಡಿ ಗ್ರಾಮ ಪಂಚಾಯತ್
ಕುಂದಾಪುರ ತಾಲೂಕು.

ಕುಂದಾಪುರ ಪೋಲಿಸ್ ಠಾಣಾ ಸರಹದ್ದಿನಲ್ಲಿ ಪಿರ್ಯಾದಿದಾರರು ಬೀಜಾಡಿ ಗ್ರಾಮದ ಸರ್ವೆ ನಂಬ್ರ 199-2 ಎಪಿ 3 ಮತ್ತು 199-2 ಎಪಿ6 ನೇ ಸ್ಥಳಗಳನ್ನು ಕ್ರಯಕ್ಕೆ ಪಡೆದಿದ್ದು. ಈ ಎರಡೂ ಸ್ಥಳಗಳನ್ನು ಒಟ್ಟು ಗೂಡಿಸಿ ಸ.ನಂ. 199-2 ಎ 2 ಎಂದು ಪ್ಲಾಟಿಂಗ್ ಮಾಡಿಕೊಂಡಿದ್ದು ಸದ್ರಿ ಸ್ಥಳದ ಪಶ್ಚಿಮ ಅಂಶದಲ್ಲಿ 3 ಅಡಿ ಅಗಲದ ಸ್ಥಳವನ್ನು ತಮ್ಮ ಸ್ಥಳದ ಸುತ್ತಲಿನ ಗಡಿಯ ರೀಪೇರಿಗಾಗಿ ಹೋಗಿ ಬರುವರೇ ಬಿಟ್ಟರುವುದಾಗಿದೆ. ದಿ. 10.03.2016 ರಂದು ಬೆಳಿಗ್ಗೆ 10.30 ಗಂಟೆಗೆ ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮ ಕೂಟ ಸೇರಿಕೊಂಡಿದ್ದು. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 12 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಅಕ್ರಮ ಕೂಟ ಸೇರಿಕೊಂಡು ದೊಂಬಿ ನಡೆಸಿದ್ದು , ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 12 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಕೈಯಲ್ಲಿ ಮಾರಕಾಯುಧಗಳಾದ ಹಾರೆ, ಪಿಕಾಸಿ, ಕತ್ತಿ ಹಿಡಿದುಕೊಂಡು ದೊಂಬಿ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 144 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 12 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಪಿರ್ಯಾದಿಯವರ ಜಾಗಕ್ಕೆ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ

ಸಂಜ್ಞೆಯೊಳಗೆ ಮಾಡಿರುವಿರಿ.

5. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 12 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಪಿರ್ಯಾದಿಯವರ ಜಾಗದ ಪಶ್ಚಿಮ ಬದಿಯಲ್ಲಿ ಹಾಕಿದ ಮಣ್ಣಿನ ದಂಡೆ ಹಾಗೂ ಬೇಲಿಯನ್ನು ಹಾಳುಗಡವಿ ನಷ್ಟವನ್ನುಂಟು ಮಾಡಿ ಮರದ ಗೆಲ್ಲುಗಳನ್ನು ಕಡಿದು ನಷ್ಟವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

6. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ1 ರಿಂದ 12 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಆ ಪೈಕಿ 2, 6, 7 ನೇ ಆರೋಪಿತರು ಕಿಟಕಿ ಮೂಲಕ ಬಿಸಾಡಿದ ಕಲ್ಲು ಪಿರ್ಯಾದಿದಾರರ ಭುಜಕ್ಕೆ ತಾಗಿ ಸಾಮಾನ್ಯ ಸ್ವರೂಪದ ಗಾಯವನ್ನು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

7. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 12 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಪಿರ್ಯಾದುದಾರರು ಮತ್ತು ಅವರ ಹೆಂಡತಿಯನ್ನುದ್ದೇಶಿ ಅವಾಚ್ಯ ಶಬ್ದದಿಂದ ಬೈದು ಮನೆಯಿಂದ ಹೊರಗೆ ಬಂದರೆ ನಿಮ್ಮನ್ನು ಕಡಿದು ಸಾಯಿಸುತ್ತೇವೆ, ನಿಮಗೆ ತಾಕತ್ತು ಇದ್ದರೆ ಬನ್ನಿ ಇಲ್ಲ ಹೊಂಡ ಕಡಿದು ಸಾಯಿಸುತ್ತೇವೆ ಎಂದು ಅವಾಚ್ಯವಾಗಿ ಬೈದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506(2) ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

8. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ1 ರಿಂದ 12 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಪಿರ್ಯಾದುದಾರರ ಜಾಗದಲ್ಲಿ ಸಾರ್ವಜನಿಕರು ನಡೆದಾಡಲು ಕಾಲು ರಸ್ತೆ ನಿರ್ಮಾಣ ಮಾಡಲು ಒತ್ತಾಯ ಪೂರ್ವಕವಾಗಿ ಜಾಗವನ್ನು ಬಿಡುವಂತೆ ಒತ್ತಡ ಹೇರಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 352 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 15.06.2022.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

Phs